(ಇಂದು ದಿನಾಂಕಃ 05-03-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ 1 ರಿಂದ 6, 8, 20 ಮತ್ತು 67 ನೇ ಪ್ರತಿವಾದಿಯರ ಪರಃ ಶ್ರೀ ಎಸ್.ವಾಯ್.ಎಸ್. ವಕೀಲರಿಂದಃ**

ನಿ.ಪಿ.22 ರ ಮೂಲ ದಾಖಲಾತಿ ಮಠದಲ್ಲಿ ಇದೆ. ನಿ.ಪಿ.22 ರ ಪ್ರತಿಯನ್ನು ದಿನಾಂಕ 13-11-2020 ರಂದು ನಾನು ಅಧ್ಯಕ್ಷನಾಗಿದ್ದುದರಿಂದ ಅದರ ಪ್ರತಿಯನ್ನು ಪಡೆದುಕೊಂಡಿದ್ದೇನೆ. ನಿ.ಪಿ.22 ರ ಮೇಲೆ ಸಾಮಾನ್ಯ ಸಭೆಗೆ ಹಾಜರಾದಂತಹ ಎಲ್ಲ ವ್ಯಕ್ತಿಗಳ ಸಹಿ ಇಲ್ಲ ಎಂದರೆ ಸಾಕ್ಷಿ ಸದಸ್ಯರ ಸಹಿ ಇವೆ ಎಂದು ಹೇಳುತ್ತಾರೆ. ನಿ.ಪಿ.23 ರಲ್ಲಿ ನಾನು, ಬಿ. ರೋಹಿದಾಸ – ಉಪಾಧ್ಯಕ್ಷರು, ಸಂಜಯ ಆಚಾರಿ- ಕಾರ್ಯದರ್ಶಿ ಸಹಿ ಹಾಕಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಹಿಂದಿನ ಅಧ್ಯಕ್ಷರು ಸಹಿ ಹಾಕಿ ಬ್ಯಾಂಕಿಗೆ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನಿ.ಪಿ.23 ನ್ನು ಕೊಟ್ಟ ನಂತರ ನಾನು ಬ್ಯಾಂಕಿನ ವ್ಯವಹಾರ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಪತ್ರವನ್ನು ಕೊಟ್ಟ ನಂತರ ಕೆಲವು ಬ್ಯಾಂಕಿನವರು ವ್ಯವಹಾರ ಮಾಡಿಲ್ಲ ಎಂದು ಹೇಳುತ್ತಾರೆ. ಎಲ್ಲಿ ಸಾಲ ಇತ್ತು ಮತ್ತು ಯಾರ ಸಾಲ ಇತ್ತು ಎಂದು ನನಗೆ ಗೊತ್ತಿಲ್ಲ. ನಿ.ಪಿ. 24 ರ ಪ್ರಕಾರ ಬಂಗಾರ ಮತ್ತು ಬೆಳ್ಳಿ ಒಡವೆಗಳ ಪಟ್ಟಿಯನ್ನು ನಾನೇ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಟ್ಟಿಯನ್ನು ಹಿಂದಿನ ಖಜಾಂಚಿಯನ್ನು ಕರೆದುಕೊಂಡು ಭೌತಿಕವಾಗಿ ಇದ್ದಂತಹ ಒಡವೆಗಳನ್ನು ಪರಿಶೀಲನೆ ಮಾಡಿ ತಯಾರಿಸಿದ್ದೇವೆ. ನಿ.ಪಿ.24 ನ್ನು ಯಾವ ದಿನಾಂಕದಂದು ತಯಾರಿಸಲಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಪಟ್ಟಿಯನ್ನು ಬೆಳಿಗ್ಗೆ 9.00 ರಿಂದ ಪ್ರಾರಂಭಿಸಿ 12.00 ಗಂಟೆಯವರೆಗೆ ಮಾಡಿದ್ದೇವೆ. ಸದರಿ ಪಟ್ಟಿಯನ್ನು ನಾವು 3 ತಾಸಿನಲ್ಲಿ ತಯಾರಿಸಿದ್ದೇವೆ ಎಂದರೆ ಸರಿ. ನಿ.ಪಿ.24 ನ್ನು ನಮ್ಮ ಕಮೀಟಿಯ ಸದಸ್ಯರು ಬರೆದಿದ್ದಾರೆ. ಸದರಿ ಪಟ್ಟಿಯನ್ನು ಶ್ರೀನಿವಾಸ ಪಾಟೀಲ್, ಕೃಷ್ಣಾನಂದ ದಿನಕರ ನಾಯ್ಕ ಇವರು ತಯಾರಿಸಿದ್ದಾರೆ. ಸದರಿ



ಎಲ್ಲಾ ಆಭರಣಗಳು ನಮ್ಮ ಮಠದ ಲಾಕರನಲ್ಲಿ ಇವೆ. ಲಾಕರನ್ನು ತೆಗೆದು ಒಡವೆಗಳನ್ನು ಪರಿಶೀಲನೆ ಮಾಡಿದಾಗ ಪಂಚನಾಮೆ ಮಾಡಿಲ್ಲ, ಸಾಕ್ಷಿ ಮುಂದುವರಿದು ನಿ.ಪಿ.24 ನ್ನು ತಯಾರಿಸಿದ್ದೇವೆ ಎಂದು ಹೇಳುತ್ತಾರೆ. ಅರವಿಂದ

ರಾಮದಾಸ ರೇವಣಕರ ಅಕ್ಕಸಾಲಿಗರನ್ನು ಒಡವೆಗಳನ್ನು ಪರಿಶೀಲನೆ ಮಾಡುವಾಗ ನಾವೇ ಕರೆಸಿದ್ದೇವೆ. ನಿ.ಪಿ.24 ರಲ್ಲಿರುವ ಎಲ್ಲಾ ಒಡವೆಗಳನ್ನು ಮಠದಲ್ಲಿಯೇ ಸದರಿ ಅಕ್ಕಸಾಲಿಗರು ಪರಿಶೀಲನೆ ಮಾಡಿದ್ದಾರೆ. ಪರಿಶೀಲನೆ ಮಾಡಿದ ನಂತರ ಎಲ್ಲಾ ಒಡವೆಗಳನ್ನು ಲಾಕರನಲ್ಲಿ ಇಟ್ಟಿದ್ದೇವೆ. ಸದರಿ ಲಾಕರನ ಬೀಗದ ಕೈಯನ್ನು ಒಂದು ನನ್ನ ಹತ್ತಿರ, ಇನ್ನೊಂದು ಖಜಾಂಚಿ ಹತ್ತಿರ ಇವೆ. ಒಡವೆಗಳಿಗೆ ಸಂಬಂಧಪಟ್ಟಂತಹ ರಜಿಸ್ಟರ ಇದೆ. ರಜಿಸ್ಟರನಲ್ಲಿ ನಮೂದಿಸಿರುವ ಒಡವೆಗಳಿಗೂ ಮತ್ತು ಭೌತಿಕವಾಗಿ ಇರುವಂತಹ ಒಡವೆಗಳಿಗೂ ವ್ಯತ್ಯಾಸ ಕಂಡುಬಂದಿದೆ. ಒಡವೆಗಳಿಗೆ ಸಂಬಂಧಪಟ್ಟಂತಹ ರಜಿಸ್ಟರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ, ಸಾಕ್ಷಿ ಮುಂದುವರಿದು ಆಗ ನಮ್ಮನ್ನು ಹೊಡೆಯಲು ಬಂದಿದ್ದರಿಂದ ನಾವು ಹೊರಗೆ ಬಂದಿದ್ದೆವು, ಮತ್ತೆ ಮಠಕ್ಕೆ ಹೋಗಿರಲಿಲ್ಲ ಎಂದು ಹೇಳುತ್ತಾರೆ. ರಜಿಸ್ಟರನಲ್ಲಿ ನಮೂದಾಗಿರುವ ಯಾವ ಯಾವ ಒಡವೆಗಳು ನಿ.ಪಿ.24 ರಲ್ಲಿ ಇಲ್ಲ ಎಂದರೆ ಸಾಕ್ಷಿ ರಜಿಸ್ಟರನಲ್ಲಿ ಆ ಬಗ್ಗೆ ನಮೂದಿಸಿದ್ದೇವೆ ಎಂದು ಹೇಳುತ್ತಾರೆ. ಕೆಲವು ಒಡವೆಗಳು ಕಾಣೆಯಾಗಿದ್ದರ ಬಗ್ಗೆ ಸಾಮಾನ್ಯ ಸಭೆಯಲ್ಲಿ ಕ್ರಮ ತೆಗೆದುಕೊಂಡಿದ್ದೇವೆ, ಸಾಕ್ಷಿ ಮುಂದುವರಿದು ಹಿಂದಿನ ಅಧ್ಯಕ್ಷರಿಗೆ ನೋಟಿಸ್ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಸಭೆಯಲ್ಲಿ ಸದರಿ ವಿಷಯದ ಬಗ್ಗೆ ಮಂಡನೆ ಮಾಡಿದ್ದೇವೆ. ಮಹಾರಾಜರಿಗೆ ಸಂಬಂಧಪಟ್ಟಂತಹ ಒಡವೆಗಳನ್ನು ತಂದು ಒಪ್ಪಿಸಬೇಕು ಎಂದು ಹೇಳಿದ್ದೇವೆ. ಹಿಂದಿನ ಅಧ್ಯಕ್ಷರಿಗೆ ನಾವು ನೋಟಿಸನ್ನು ಕೊಟ್ಟಿದ್ದು ಅವರು ನೋಟಿಸನ್ನು ತೆಗೆದುಕೊಂಡಿರುವುದಿಲ್ಲ. ಕಾಣೆಯಾದಂತಹ ಒಡವೆಗಳಿಗೆ ಸಂಬಂಧಪಟ್ಟಂತೆ ನಾವು ದೂರನ್ನು ಕೊಟ್ಟಿದ್ದೇವೆ. ನಿ.ಪಿ.26 ರ ಮೇಲೆ ಯಾರ ಸಹಿ ಇಲ್ಲ ಎಂದರೆ ಸರಿ, ಸಾಕ್ಷಿ ಅದು ಕೇವಲ ಅಜೆಂಡಾ ಎಂದು ಹೇಳುತ್ತಾರೆ. ನಿ.ಪಿ.26 ನ್ನು ಯಾವ ಆಧಾರದ ಮೇಲೆ ತಯಾರಿಸಿದ್ದೀರಿ ಎಂದರೆ ಸಾಕ್ಷಿ ಹಿಂದಿನ ಠರಾವನ್ನು ನಮೂದಿಸಿ



ತಯಾರಿಸಿದ್ದೇವೆ ಎಂದು ಹೇಳುತ್ತಾರೆ. ಮೂಲ ಠರಾವು ಪುಸ್ತಕವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಮಠದಲ್ಲಿ ಇದೆ ಎಂದು ಹೇಳುತ್ತಾರೆ. ನಿ.ಪಿ.28 ನ್ನು ಜಿಲ್ಲಾಧಿಕಾರಿಗಳಿಗೆ ಹೆಸರಿಸಿ ಬರೆಯಲಾಗಿದೆ ಎಂದರೆ ಸರಿ. ಜಿಲ್ಲಾಧಿಕಾರಿಗಳಿಗೆ ಕೆಲವು ಒಡವೆಗಳು ಕಾಣೆಯಾಗಿವೆ, ಸೂಕ್ತ ತನಿಖೆ ಆಗಬೇಕು ಎಂದು ಬರೆಯಲಾಗಿತ್ತು. ಸದರಿ ಪತ್ರದ ಆಧಾರದ ಮೇಲೆ ಜಿಲ್ಲಾಧಿಕಾರಿಯವರು ತಹಶೀಲ್ದಾರ ಇವರನ್ನು ನೇಮಕ ಮಾಡಿದ್ದು ಸದರಿಯವರು ಕ್ರಮ ಕೈಗೊಂಡಿಲ್ಲ. ತಹಶೀಲ್ದಾರ ಇವರು ಸರಿಯಾಗಿ ಕ್ರಮ ತೆಗೆದುಕೊಂಡಿಲ್ಲ ಎಂದು ಜಿಲ್ಲಾಧಿಕಾರಿಯವರಿಗೆ ಪತ್ರ ವ್ಯವಹಾರ ಮಾಡಿಲ್ಲ ಎಂದರೆ

ಸಾಕ್ಷಿ ತಹಶೀಲ್ದಾರರನ್ನು ಭೇಟ್ಟಿಯಾಗಿದ್ದೆವು ಎಂದು ಹೇಳುತ್ತಾರೆ. ಸದರಿ ತಹಶೀಲ್ದಾರರು ತಾನು ಅನ್ಯಧರ್ಮೀಯರಾಗಿದ್ದುದರಿಂದ ತಾನು ಮಠಕ್ಕೆ ಬರಲು ಆಗುವುದಿಲ್ಲ ಎಂದು ಮೌಖಿಕವಾಗಿ ಹೇಳಿದ್ದಾರೆ.

ಸಂಜಯ್ ಮಂಜುನಾಥ ಆಚಾರಿ ಇವರು ಮಠದ ಕಾರ್ಯದರ್ಶಿ ಎಂದರೆ ಸರಿ. ಸದರಿಯವರು ಕೆನರಾ ಬ್ಯಾಂಕಿನವರಿಗೆ ಬ್ಯಾಂಕ್ ಖಾತೆಯ ವ್ಯವಹಾರವನ್ನು ನಿಲ್ಲಿಸಬೇಕು ಎಂದು ಪತ್ರ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಿ.ಪಿ.30 ನ್ನು ಬ್ಯಾಂಕಿನವರು ಬರೆದಂತಹ ಪತ್ರಕ್ಕೆ ನಾವು ಪ್ರತ್ಯುತ್ತರ ಕೊಟ್ಟಿದ್ದೇವೆ. ನಾವು ಪತ್ರವನ್ನು ಬರೆದ ನಂತರ ಸದರಿ ಬ್ಯಾಂಕಿವರು ಬ್ಯಾಂಕ್ ಖಾತೆಯ ವ್ಯವಹಾರವನ್ನು ನಿಲ್ಲಿಸಿಲ್ಲ. ನಿ.ಪಿ. 31 ರ ಪತ್ರವನ್ನು ಖುದ್ದಾಗಿ ಸುರೇಂದ್ರ ವಿಠ್ಠಲ್ ಸಾವಂತ್ ಇವರಿಗೆ ಕೊಟ್ಟಿದ್ದೇವೆ. ಸದರಿ ನೋಟಿಸನ್ನು ಸುರೇಂದ್ರ ವಿಠ್ಠಲ್ ಸಾವಂತ್ ಇವರು ತೆಗೆದುಕೊಂಡಿಲ್ಲ. ನಿ.ಪಿ.31 ನ್ನು ಸುರೇಂದ್ರ ವಿಠ್ಠಲ್ ಸಾವಂತ್ ಇವರಿಗೆ ಕೊಟ್ಟಿರಲಿಲ್ಲ ಅನ್ನುವುದು ಸರಿಯಲ್ಲ. ನಿ.ಪಿ. 32 ರಿಂದ ನಿ.ಪಿ.35 ಇವು ರಾಜಿನಾಮೆ ಪತ್ರಗಳು ಎಂದರೆ ಸರಿ. ಯಾವ ಕಾರಣಕ್ಕಾಗಿ ಸದರಿಯವರು ರಾಜೀನಾಮೆ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ರಾಜಿನಾಮೆ ಪತ್ರಗಳನ್ನು ನಾವು ಸ್ವೀಕರಿಸಿಲ್ಲ. ನಿ.ಪಿ.36 ರ ಮೂಲ ಪ್ರತಿಯನ್ನು ಹಾಜರುಪಡಿಸಿಲ್ಲ. ನಿ.ಪಿ. 38 ರ ಮೇಲೆ ಯಾರದ್ದೂ ಸಹಿ ಇಲ್ಲ ಎಂದರೆ ಸಾಕ್ಷಿ ಯಾರದ್ದೂ ಸಹಿ



ಇರುವುದಿಲ್ಲ ಎಂದು ಹೇಳುತ್ತಾರೆ. ನಿ.ಪಿ.39 ರ ಮೇಲೂ ಸಹ ಯಾರದ್ದೂ ಸಹಿ ಇಲ್ಲ ಎಂದರೆ ಸಾಕ್ಷಿ ಯಾರದ್ದೂ ಸಹಿ ಇರುವುದಿಲ್ಲ ಎಂದು ಹೇಳುತ್ತಾರೆ. ನಿ.ಪಿ.40 ರ ಪ್ರಕಾರ ಬ್ಯಾಂಕ್ ಖಾತೆಯ ವ್ಯವಹಾರಗಳನ್ನು ಬಂದ್ ಮಾಡಬೇಕು ಎಂದು 1 ನೇ ಪ್ರತಿವಾದಿ ಬ್ಯಾಂಕಿಗೆ ಕೊಟ್ಟಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ನಿ.ಪಿ.40 ನ್ನು ಕೊಟ್ಟ ಸಮಯದಲ್ಲಿ ಸದರಿ ಬ್ಯಾಂಕಿನ ವ್ಯವಹಾರಗಳು ನಡೆಸಲು ನನಗೆ ಯಾವುದೇ ಅಧಿಕಾರ ಇರಲಿಲ್ಲ ಅನ್ನುವುದು ಸರಿಯಲ್ಲ.

ನಿ.ಪಿ.42 ರ ಮೇಲೂ ಸಹ ಯಾರದ್ದೂ ಸಹಿ ಇಲ್ಲ ಎಂದರೆ ಸರಿ. ಅದರ ಮೂಲ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಮಠದಲ್ಲಿ ಇದೆ ಎಂದು ಹೇಳುತ್ತಾರೆ. ನಿ.ಪಿ.43 ರ ಆಧಾರದ ಮೇಲೆ ಪೊಲೀಸರು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ನಿ.ಪಿ.43 ರಲ್ಲಿ ಇರುವ ವಿಷಯಗಳು ಸತ್ಯಕ್ಕೆ ದೂರವಾಗಿದ್ದರಿಂದ ಪೊಲೀಸರು ಕ್ರಮ ತೆಗೆದುಕೊಂಡಿಲ್ಲ ಎಂದರೆ ಸಾಕ್ಷಿ ಸತ್ಯ ವಿಷಯಗಳನ್ನು ತಿಳಿಸಿದ್ದೇನೆ ಎಂದು ಹೇಳುತ್ತಾರೆ. ನಿ.ಪಿ.45 ರ ಆಧಾರದ ಮೇಲೆ ಜಿಲ್ಲಾ

ವರಿಷ್ಠಾಧಿಕಾರಿಗಳು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ನಿ.ಪಿ. 46 ಕಲಂ 107 ದಂಡ ಪ್ರಕ್ರಿಯಾ ಸಂಹಿತೆಯಡಿಯಲ್ಲಿ ಕೊಟ್ಟಂತಹ ನೋಟಿಸ್ ಎಂದರೆ ಸರಿ. ತಹಶೀಲ್ದಾರ ಕಚೇರಿಯಲ್ಲಿ ನಾವು ಯಾವುದೇ ಬಾಂಡ್‌ನ್ನು ಬರೆದುಕೊಟ್ಟಿಲ್ಲ. ನಿ.ಪಿ. 47 ರಲ್ಲಿ ಮಠ ಒಡೆದಿದ್ದರ ಬಗ್ಗೆ ದಿನಪತ್ರಿಕೆಯಲ್ಲಿ ಬಂದಿದೆ. ಸದರಿ ಸುದ್ದಿಯಲ್ಲಿ ಯಾರು ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಯಾವ ಕಾರಣಕ್ಕಾಗಿ ಮಠವನ್ನು ಒಡೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮಠ ಒಡೆದಿದ್ದರ ಬಗ್ಗೆ ನಾನು ಪೊಲೀಸರಿಗೆ ದೂರು ಕೊಟ್ಟಿದ್ದೇನೆ. ನಿ.ಪಿ. 48 ರಿಂದ ನಿ.ಪಿ. 52 ರ ವರೆಗಿನ ದಾಖಲಾತಿಗಳ ಮೇಲೆ ಸಹಿ ಇಲ್ಲ ಎಂದರೆ ಸರಿ. ಅವುಗಳ ಮೂಲ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಮಠದಲ್ಲಿ ಇವೆ ಎಂದು ಹೇಳುತ್ತಾರೆ. ನಮಗೆ ಅನುಕೂಲವಾಗಲು ನಿ.ಪಿ.48 ರಿಂದ ನಿ.ಪಿ.52 ರ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾವು ಯಾವುದೇ ಪರಿಹಾರವನ್ನು ಪಡೆಯಲು ಅರ್ಹರಲ್ಲ ಅನ್ನುವುದು ಸರಿಯಲ್ಲ. ಅಧ್ಯಕ್ಷನಾದ ನಂತರ ನನ್ನ ಅವಧಿ



ಮುಗಿದರೂ ಸಹ ನಾನು ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿದಿದ್ದೇನೆ ಎಂಬ ತಪ್ಪು ಕಲ್ಪನೆಯಿಂದ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ನಂ. 9 ರಿಂದ 11, ಪ್ರತಿವಾದಿ ನಂ.18, 19,21 ಮತ್ತು 23, ಪ್ರತಿವಾದಿ ನಂ. 29 ರಿಂದ 31, ಪ್ರತಿವಾದಿ ನಂ. 73, 76, 77, ಪ್ರತಿವಾದಿ ನಂ. 58, 59, 61, 65, ಪ್ರತಿವಾದಿ ನಂ. 7,52, 53,68, 74,75 ರವರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್, ಕಾರವಾರ